# ಭಗವಂತನ ಲೀಲೆ



❁ **ಭಕ್ತ** : ಭಗವಂತ ದುಷ್ಟರನ್ನೇಕೆ ಸೃಷ್ಟಿ ಮಾಡಿದ?

**ಶ್ರೀರಾಮಕೃಷ್ಣರು:** ಆತನ ಇಚ್ಛೆ, ಆತನ ಲೀಲೆ. ಆತನ ಮಾಯೆಯಲ್ಲಿ ವಿದ್ಯೆಯೂ ಇದೆ. ಅಂಧಕಾರದ ಆವಶ್ಯಕತೆಯೂ ಇದೆ. ಅದು ಬೆಳಕಿನ ಮಹತ್ತನ್ನು ಇನ್ನೂ ಹೆಚ್ಚಾಗಿ ಪ್ರಕಾಶಗೊಳಿಸುತ್ತದೆ. ಕಾಮ, ಕ್ರೋಧ, ಲೋಭ ಇವು ಕೆಟ್ಟವೇನೊ ನಿಜ. ಹಾಗಾದರೆ ಏಕೆ ಅವನ್ನು ಸೃಷ್ಟಿಸಿದ್ದಾನೆ ಅಂತೀಯೊ? ಮಹಾಪುರುಷರನ್ನಾಗಿ ತಯಾರು ಮಾಡಲು. ಇಂದ್ರಿಯಗಳನ್ನು ಗೆದ್ದರೆ ಮನುಷ್ಯ ಮಹಾಪುರುಷನಾಗುತ್ತಾನೆ. ಜಿತೇಂದ್ರಿಯನ ಕೈಯಲ್ಲಿ ಏನು ತಾನೆ ಸಾಧ್ಯವಿಲ್ಲ? ಭಗವಂತನ ಸಾಕ್ಷಾತ್ಕಾರವೂ ಆತನ ಕೃಪೆಯಿಂದ ದೊರೆತುಬಿಡುತ್ತದೆ. ಮತ್ತೆ ಬೇರೆ ದೃಷ್ಟಿಯಿಂದ ನೋಡು. ಕಾಮದಿಂದಲೆ ಆತನ ಸೃಷ್ಟಿ-ಲೀಲೆ ಮುಂದುವರಿಯುತ್ತದೆ.

❁ ವಿಜ್ಞಾನಿಗೆ ಮತ್ತೆ ಕಂಡುಬರುತ್ತದೆ, ಬ್ರಹ್ಮನೇ ಸಾಕಾರನಾಗಿರುವುದು. ಯಾರು ಗುಣಾತೀತನೋ ಆತನೇ ಷಡೈಶ್ವರ್ಯಪೂರ್ಣ ಭಗವಂತನಾಗಿದ್ದಾನೆ. ಈ ಜೀವ, ಜಗತ್ತು, ಮನಸ್ಸು, ಬುದ್ಧಿ, ಭಕ್ತಿ, ವೈರಾಗ್ಯ, ಜ್ಞಾನ — ಇವೆಲ್ಲಾ ಆತನ ಐಶ್ವರ್ಯ.

❁ ಈ ಜಗತ್ತು ಎಷ್ಟು ವಿಚಿತ್ರ, ಎಷ್ಟು ಬಗೆಯ ವಸ್ತುಗಳು! — ಚಂದ್ರ, ಸೂರ್ಯ, ನಕ್ಷತ್ರ ಇತ್ಯಾದಿ. ಎಷ್ಟು ಬಗೆಯ ಜೀವಿಗಳು! — ದೊಡ್ಡದು, ಪುಟ್ಟದು, ಒಳ್ಳೆಯದು, ಕೆಟ್ಟದ್ದು, ಬಲವಾದದ್ದು , ದುರ್ಬಲವಾದ್ದು; ಕೆಲವಕ್ಕೆ ಜಾಸ್ತಿ ಶಕ್ತಿ, ಕೆಲವಕ್ಕೆ ಕಡಿಮೆ ಶಕ್ತಿ.

❁ ಭಗವಂತ ವಿಭುರೂಪದಲ್ಲಿ ಎಲ್ಲ ಭೂತಗಳಲ್ಲಿಯೂ ಇದ್ದಾನೆ, ಇರುವೆಯಲ್ಲಿ ಕೂಡ; ಆದರೆ ಮಾತ್ರ ಶಕ್ತಿ ವಿಶೇಷತೆಯಿಂದ. ಹಾಗಿಲ್ಲದಿದ್ದರೆ ಒಬ್ಬ ಹತ್ತು ಜನರನ್ನು ಬಡಿದೋಡಿಸಿಬಿಡುವುದಕ್ಕೂ, ಇನ್ನೊಬ್ಬ ಒಬ್ಬನನ್ನೂ ಕೂಡ ಎದುರಿಸಲಾಗದಿರುವುದಕ್ಕೂ ಎಲ್ಲಾಗುತ್ತಿತ್ತು?

❁ ಆದ್ಯಾಶಕ್ತಿ ಲೀಲಾಮಯಿ; ಸೃಷ್ಟಿ ಸ್ಥಿತಿ ಪ್ರಳಯ ಮಾಡುತ್ತಾಳೆ. ಆಕೆಗೇ **ಕಾಳೀ** ಅಂತ ಹೆಸರು. ಕಾಳಿಯೇ ಬ್ರಹ್ಮ, ಬ್ರಹ್ಮನೇ ಕಾಳಿ. ವಸ್ತು ಒಂದೇ. ನಿಷ್ಕ್ರಿಯವಾಗಿರುವಾಗ, ಸೃಷ್ಟಿ ಸ್ಥಿತಿ ಪ್ರಳಯ ಮಾಡದಿರುವಾಗ ಅದೇ ವಸ್ತುವಿಗೆ ಬ್ರಹ್ಮ ಅಂತ ಹೆಸರು. ಆದರೆ ಆ ಎಲ್ಲಾ ಕಾರ್ಯಗಳನ್ನೂ ಮಾಡುತ್ತಿರುವಾಗ ಅದೇ ವಸ್ತುವಿಗೆ ಕಾಳಿ ಅಂತ ಹೆಸರು. ಶಕ್ತಿ ಅಂತ ಹೆಸರು. ವಸ್ತುವೇನೋ ಒಂದೇ; ಹೆಸರು ರೂಪ ಮಾತ್ರ ಬೇರೆ ಬೇರೆ.

❁ ಈ ಜಗತ್ತು ನಾಶವಾದಾಗ, ಮಹಾಪ್ರಳಯವಾದಾಗ ಮುಂದಿನ ಸೃಷ್ಟಿಗಾಗಿ ಬೀಜಗಳನ್ನೆಲ್ಲಾ ಶೇಖರಿಸಿ ಇಟ್ಟುಕೊಂಡಿರುತ್ತಾಳೆ. ಇದು ಮನೆಯ ಯಜಮಾನಿ ತನಗೆ ಬೇಕಾಗುವ ಎಲ್ಲಾ ಬಗೆಯ ವಸ್ತುಗಳನ್ನು ಒಂದು ಗುಡಾಣದಲ್ಲಿ ಶೇಖರಿಸಿ ಇಟ್ಟುಕೊಳ್ಳುವುದಿಲ್ಲವೆ, ಹಾಗೆ. ಯಜಮಾನಿಯರು ಇಂಥದೊಂದು ಗುಡಾಣ ಇಟ್ಟುಕೊಂಡಿರುತ್ತಾರೆ. ಅದರೊಳಗೆ ಸಮುದ್ರದ ನೊರೆ, ನೀಲಿ ಗುಳಿಗೆ, ಸೌತೆಕಾಯಿ, ಕುಂಬಳಕಾಯಿ, ಸೋರೆಕಾಯಿ ಬೀಜಗಳ ಚಿಕ್ಕಚಿಕ್ಕ ಪೊಟ್ಟಣಗಳು ಇವನ್ನೆಲ್ಲಾ ಇಡುತ್ತಾರೆ. ಬೇಕಾದಾಗ ಅವನ್ನು ಹೊರಕ್ಕೆ ತೆಗೆಯುತ್ತಾರೆ. ಅದೇ ರೀತಿಯಾಗಿ ಭಗವತಿ ಬ್ರಹ್ಮಮಯಿ, ಈ ಜಗತ್ತು ನಾಶವಾದ ನಂತರ ಎಲ್ಲಾ ವಿಧದ ಬೀಜಗಳನ್ನೂ ಮುಂದಿನ ಸೃಷ್ಟಿಗಾಗಿ ಶೇಖರಿಸಿ ಇಟ್ಟುಕೊಳ್ಳುತ್ತಾಳೆ. ಸೃಷ್ಟಿ ಮಾಡಿದ ನಂತರ ಆದ್ಯಾಶಕ್ತಿ ಈ ಜಗತ್ತಿನ ಒಳಗೇ ಇರುತ್ತಾಳೆ — ಈ ಜಗತ್ತನ್ನು ಹೆತ್ತು ಅದರೊಳಗೇ ಅಂತರ್ಗತವಾಗಿರುತ್ತಾಳೆ. ವೇದದಲ್ಲಿ ಇದೆ 'ಊರ್ಣನಾಭಿ'ಯ (ಜೇಡರ ಹುಳುವಿನ) ಮತ್ತು ಅದರ ಬಲೆಯ ವಿಷಯ. ಜೇಡರ ಹುಳು ತನ್ನ ಹೊಟ್ಟೆಯಿಂದಲೇ ತೆಗೆದ ತಂತುವಿನಿಂದ ಬಲೆ ಕಟ್ಟಿ , ಅದರ ಮೇಲೆ ತಾನೂ ನಿಲ್ಲುತ್ತದೆ. ಹಾಗೆಯೇ ಭಗವಂತ ಈ ಆಧಾರ-ಆಧೇಯ ಎರಡೂ ಆಗಿದ್ದಾನೆ.

❁ ಭಗವಂತನ ಕಾರ್ಯವನ್ನು, ಅಂದರೆ ಆತ ಯಾವ ಉದ್ದೇಶದಿಂದ ಏನು ಮಾಡುತ್ತಾನೆ ಎಂಬುದನ್ನು ಅರಿಯಲು ಸಾಧ್ಯವೆ? ಆತ ಸೃಷ್ಟಿಯ ಪಾಲನೆ, ಸಂಹಾರ ಎಲ್ಲವನ್ನೂ ಮಾಡುತ್ತಿದ್ದಾನೆ. ಆತ ಏತಕ್ಕೆ ಸಂಹಾರ ಮಾಡುತ್ತಾನೆ ಎಂಬುದನ್ನು ನಮಗೆ ಅರಿತುಕೊಳ್ಳಲು ಸಾಧ್ಯವೆ?

❁ ಮಾನವಜನ್ಮದ ಉದ್ದೇಶ ಭಕ್ತಿಯನ್ನು ದೊರಕಿಸಿಕೊಳ್ಳುವುದೇ. ಉಳಿದವುಗಳ ಸಂಬಂಧವಾಗಿ ನಮಗೆ ಯಾವುದು ಶ್ರೇಯಸ್ಕರವಾದದ್ದು ಎಂಬುದು ತಾಯಿಗೇ ಗೊತ್ತು. ನಾನು ತೋಟಕ್ಕೆ ಬಂದಿರುವುದು ಮಾವಿನಹಣ್ಣು ತಿನ್ನುವುದಕ್ಕೆ. ಮರಗಳೆಷ್ಟಿವೆ, ಕೊಂಬೆಗಳೆಷ್ಟಿವೆ, ಎಷ್ಟೊಂದು ಕೋಟಿ ಎಲೆಗಳಿವೆ, ಇವುಗಳ ಲೆಕ್ಕಾಚಾರ ನನಗೇಕೆ? ನಾನು ಕೇವಲ ಮಾವಿನಹಣ್ಣು ಮಾತ್ರ ತಿನ್ನುತ್ತೇನೆ; ಮರ, ಕೊಂಬೆ, ಎಲೆಗಳ ಲೆಕ್ಕಾಚಾರ ನನಗೆ ಬೇಕಾಗಿಲ್ಲ.

❁ ಬ್ರಹ್ಮ-ಶಕ್ತಿ ಅಭೇದ. ಶಕ್ತಿಯನ್ನು ಒಪ್ಪದೆ ಇದ್ದರೆ ಈ ಜಗತ್ತು ಮಿಥ್ಯೆಯಾಗಿಬಿಡುತ್ತದೆ. ನಾನು, ನೀನು, ಮಠ, ಹೆಂಡತಿ, ಮಕ್ಕಳು ಎಲ್ಲಾ ಮಿಥ್ಯೆಯಾಗಿ ಬಿಡುತ್ತವೆ. ಆದ್ಯಾಶಕ್ತಿ ಆಧಾರವಾಗಿರುವುದರಿಂದ ಈ ಜಗತ್ತು ನಿಂತುಕೊಂಡಿದೆ.

**ಶ್ರೀರಾಮಕೃಷ್ಣ ವಚನವೇದದಿಂದ**